ಎಂದು ನಾವು ಹೆಸರಿಸಬಹುದು. ಆದರೆ ಉಪನಿಷತ್ತುಗಳು ಅದನ್ನು ಬ್ರಹ್ಮನ್ ಎಂದು ಕರೆಯುತ್ತವೆ.

**ದೇವರು ಎಂದರೆ ಯಾರು?:** ಸ್ಪಿನೋಜಾನ ಪ್ರಕಾರ ಇರುವುದೆಲ್ಲವೂ ಒಂದೇ. ಅದಕ್ಕೆ ಎರಡು ಗುಣಧರ್ಮಗಳಿವೆ: ವಿಕಸನ ಹೊಂದುವುದು ಮತ್ತು ಸ್ವಪ್ರಜ್ಞೆ. ಈ ಏಕತತ್ತ್ವವನ್ನೇ ದೇವರು ಎಂದು ಕರೆಯುವುದು.

**ನೀವು ಮನಸ್ಸು ಮತ್ತು ದ್ರವ್ಯಗಳು ಬೇರೆ ಬೇರೆ ಎಂಬ ದ್ವೈತವಾದವನ್ನು ಕೈಬಿಡಲು ಕಾರಣವೇನು?:** ಅದಕ್ಕೆ ಪ್ರಬಲವಾದ ಕಾರಣವೆಂದರೆ ಜಡ ಜಗತ್ತು, ಜಡವಲ್ಲದ ಮನಸ್ಸಿನ ಮೇಲೆ ಹೇಗೆ ತಾನೇ ಪ್ರಭಾವ ಬೀರುತ್ತದೆ ಮತ್ತು ಜಡವಲ್ಲದ ಮನಸ್ಸು ಜಡಜಗತ್ತಿನ ಮೇಲೆ ಪ್ರಭಾವ ಬೀರುವುದು ಹೇಗೆ – ಇದನ್ನು ವಿವರಿಸಲು ನಮಗೆ ಅಸಾಧ್ಯವಾದುದರಿಂದ.

**ತತ್ತ್ವಮಸಿ (ನೀನೇ ಅದಾಗಿರುವೆ) ಎಂದರೆ ಏನು?:** ಇದು ಭೌತಿಕ ವಿಧಾನವಲ್ಲವೆಂಬುದು ಸರಿಯೇ. ಇದನ್ನು ಭೌತಾತೀತ ಹೇಳಿಕೆಯಾಗಿ ಪರಿಗಣಿಸಬೇಕು. ಇದು ಎಷ್ಟು ಸರಳವೆಂದರೆ, ಇದನ್ನು ವಿವರಿಸುವುದು ಅಸಾಧ್ಯ. ಕೇವಲ ಬುದ್ಧಿಶಕ್ತಿಯಿಂದ ಅದನ್ನು ಗ್ರಹಿಸಲಾಗದು. ಆದರೆ ಅದು ಯಾವುದೋ ಸಂದರ್ಭದಲ್ಲಿ ಮಿಂಚಿನಂತೆ ಹೊಳೆಯಬಹುದು. ಆಗ ಅದಿರುವುದು ಗೊತ್ತಾಗುವುದು. ಹಾಗೂ, ನಿಮ್ಮ ಜೀವನದ ಎಲ್ಲ ಸಂದರ್ಭದಲ್ಲಿ ಅನುಷ್ಠಾನ ಪ್ರಯೋಜನಕ್ಕೆ ಬರುವ ಬೋಧನೆಯಲ್ಲದಿದ್ದರೂ, ಅದು ಮುಂದೆಂದೂ ನಿಮ್ಮನ್ನು ಬಿಟ್ಟುಹೋಗಲಾರದು.

ವಿಯನ್ನಾ ವಿಶ್ವವಿದ್ಯಾನಿಲಯ ಮತ್ತು ಇತರ ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಸ್ಕ್ರೋಡಿಂಗರ್ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದರು. ಅವರು ಆಧುನಿಕ ಭೌತವಿಜ್ಞಾನದ ಪ್ರವರ್ತಕರಲ್ಲಿ ಒಬ್ಬರಾಗಿದ್ದಾರೆ. ಅವರು ಧಾರ್ಮಿಕ ಸಂಕೇತವನ್ನು ಬಳಸಿಕೊಳ್ಳುತ್ತಿದ್ದರು ಮತ್ತು ತಮ್ಮ ವೈಜ್ಞಾನಿಕ ಕಾರ್ಯವು ಭಗವಂತನನ್ನು ಸಮೀಪಿಸುವ ಮಾರ್ಗವೆಂದು ನಂಬಿದ್ದರು. ಈ ಮನೋಭಾವವನ್ನು ಬೆಳೆಸಿಕೊಳ್ಳುವಲ್ಲಿ, ಪ್ರಖ್ಯಾತ ತತ್ತ್ವಜ್ಞಾನಿ ಶೋಪೆನ್‌ಹೌರ್ ಅವರ ಪ್ರಭಾವ ಅವರ ಮೇಲೆ ಆಗಿತ್ತು ಎಂದು ಕೆಲವರು ಹೇಳುತ್ತಾರೆ.

ಮ್ಯಾಕ್ಸ್‌ಬಾರ್ನ್ ಎಂಬ ಹಿರಿಯ ಭೌತವಿಜ್ಞಾನಿ ಹೀಗೆ ಬರೆಯುತ್ತಾರೆ: "ಸೈದ್ಧಾಂತಿಕ ಭೌತವಿಜ್ಞಾನವೆಂದರೆ ತತ್ತ್ವಶಾಸ್ತ್ರವಲ್ಲದೇ ಬೇರೆಯಲ್ಲ ಎನ್ನುವುದು ನನ್ನ ದೃಢ ನಿಶ್ಚಯ. **ಕಾಲ** ಮತ್ತು **ದೇಶ** (ಸಾಪೇಕ್ಷ ಸಿದ್ಧಾಂತ), **ಕಾರಣ** (ಕ್ವಾಂಟಮ್ ಸಿದ್ಧಾಂತ) ಹಾಗೆಯೇ **ವಸ್ತು** ಮತ್ತು **ದ್ರವ್ಯ** (ಅಣುಸಿದ್ಧಾಂತ) – ಈ ಮೂಲಭೂತ ಪರಿಕಲ್ಪನೆಗಳಲ್ಲಿ ಕ್ರಾಂತಿಯನ್ನೇ ಅದು ತಂದೊಡ್ಡಿದೆ. ಅದು ಭೌತವಿಜ್ಞಾನದ ಬಹಳ ಆಚೆಗೆ ಅಳವಡಿಸಬಲ್ಲ ಚಿಂತನವಿಧಾನಗಳನ್ನು ನಮಗೆ ಬೋಧಿಸಿದೆ." ತಮ್ಮ ಸಂಶೋಧನೆಗಳ ಮೂಲಕ ಸ್ಕ್ರೋಡಿಂಗರ್ ನಾವು ಈ ಪ್ರಪಂಚವನ್ನು ನೋಡುವ ವಿಧಾನದಲ್ಲಿ ಉಂಟಾದ ಈ ಕ್ರಾಂತಿಕಾರಕ ಬದಲಾವಣೆಗೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಅರ್ನಾಲ್ಡ್ ಸೋಮರ್‌ಫೀಲ್ಡ್ ಎಂಬ ವಿಜ್ಞಾನಿ ಹೇಳುವಂತೆ, "ಇದು ಇಪ್ಪತ್ತನೆಯ ಶತಮಾನದ ಅತ್ಯಾಶ್ಚರ್ಯಕರವಾದ ಅನ್ವೇಷಣೆಗಳಲ್ಲಿಯೇ ಅತ್ಯದ್ಭುತವಾದ ಅನ್ವೇಷಣೆಯಾಗಿದೆ."

**ನನ್ನ ಪಾಲಿಗೆ ಪ್ರಪಂಚವೆನ್ನುವುದು ಒಂದೇ ಬಗೆಯದು. ಅಸ್ತಿತ್ವದಲ್ಲಿ ಇರುವುದೊಂದು, ನಾನು ನೋಡುವುದೊಂದು ಎನ್ನುವ ಎರಡು ವಿಶ್ವಗಳಿಲ್ಲ. ಹಾಗೆಯೇ ವಿಷಯ(object) ಮತ್ತು ವಿಷಯಿ (subject) ಎರಡೂ ಒಂದೇ. ಅವುಗಳ ನಡುವಣ ಗೋಡೆಯನ್ನು ಭೌತಿಕ ವಿಜ್ಞಾನವು ಒಡೆದುಹಾಕಿದೆ ಎಂದು ಹೇಳಲಾಗದು, ಏಕೆಂದರೆ ಆತ್ಯಂತಿಕವಾಗಿ ಅಂತಹ ಒಂದು ನಡುಗೋಡೆ ಇಲ್ಲವೇ ಇಲ್ಲ. - ಸ್ಕ್ರೋಡಿಂಗರ್**

ಮೇಲಿನ ಸಿದ್ಧಾಂತಗಳು ತತ್ತ್ವಶಾಸ್ತ್ರೀಯವಾಗಿಯೂ ಕ್ರಾಂತಿಕಾರಕಗಳಾಗಿವೆ. ಇದಕ್ಕೆ ನಾಲ್ಕು ಕಾರಣಗಳನ್ನು ನೀಡಬಹುದು:

**೧. ಅವು ನ್ಯೂಟನ್ನನ ಕಾಲದಿಂದ ಪ್ರಚಲಿತವಿದ್ದ ಭೌತಿಕವಾದವನ್ನು ಅಪಮೌಲ್ಯಗೊಳಿಸಿದವು.**

**೨. ಈ ಪ್ರಪಂಚದಲ್ಲಿ ಇರುವ ಎಲ್ಲವೂ ಬೇರೆ ಯಾವುದೋ ಒಂದರ ಭಾಗವಾಗಿದೆ; ಹೀಗಾಗಿ ಈ ವಿಶ್ವದಲ್ಲಿ ಯಾವುದೇ ಸರಹದ್ದುಗಳಿಲ್ಲ ಎಂದು ಅವು ತೋರಿಸಿಕೊಟ್ಟವು.**

**೩. ನಿಸರ್ಗದ ವಿಷಯದಲ್ಲಿ ಹೀಗೆಯೇ ಜರುಗಬೇಕು ಎಂಬ ನಿಶ್ಚಿತವಾದ ಮತ್ತು ಹೀಗೆಯೇ ಆಗುತ್ತದೆ ಎಂದು ಭವಿಷ್ಯ ನುಡಿಯುವ ಸಾಧ್ಯತೆಗಳನ್ನು ಅವು ತಳ್ಳಿಹಾಕಿದವು.**

**೪. ನಿಸರ್ಗದಲ್ಲಿ ಮಾನವನ ಮನಸ್ಸಿನ ಪಾತ್ರವನ್ನು ಕುರಿತು ಅವು ವಿಶ್ಲೇಷಣೆ ನಡೆಸಿ, ಮಾನವ ಸಾಕ್ಷಿಯನ್ನು ನೈಸರ್ಗಿಕ ತತ್ತ್ವಶಾಸ್ತ್ರದ ಕೇಂದ್ರಬಿಂದುವನ್ನಾಗಿ ಮಾಡಿದವು. ಹೀಗಾಗಿ ಇದುವರೆಗೂ ನಂಬಿಕೊಂಡು ಬಂದಿದ್ದ ಸಾಂಪ್ರದಾಯಿಕ ಭಾವನೆಗಳು ತಿರುಗುಮುರುಗಾದವು.**

ನೂತನ ಕ್ವಾಂಟಮ್ ಸಿದ್ಧಾಂತದ ಪ್ರಭಾವ ಭೌತವಿಜ್ಞಾನದ ಆಚೆಗೂ ಮೀರಿ ಬೆಳೆದು, ವಿಜ್ಞಾನ ಮತ್ತು ತತ್ತ್ವಶಾಸ್ತ್ರಗಳೆರಡೂ ಒಂದು ಬಗೆಯ ಸಂದಿಗ್ಧ ಸ್ಥಿತಿಯಲ್ಲಿ ನಿಲ್ಲುವ ಹಾಗೆ ಮಾಡಿದೆ. ಈ ಪ್ರಕ್ರಿಯೆಯಲ್ಲಿ ಸ್ಕ್ರೋಡಿಂಗರ್ ಅವರು ಮಹತ್ವದ ಪಾತ್ರ ವಹಿಸಿದರೆನ್ನುವುದು ನಿರ್ವಿವಾದ.

ಎರಡನೆಯ ಮಹಾಯುದ್ಧದ ಅನಂತರದ ದಿನಗಳಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಜಾಗತಿಕ ಭೌತವಿಜ್ಞಾನಿಗಳ ಸಮ್ಮೇಳನದಲ್ಲಿ ಸ್ಕ್ರೋಡಿಂಗರ್ ಹೀಗೆ ಘೋಷಿಸುತ್ತಾರೆ: **"ಚೈತನ್ಯವನ್ನು ಬಹುತ್ವದಲ್ಲಿ ಅನುಭವಿಸಲು ಸಾಧ್ಯವೇ ಇಲ್ಲ. ಏಕತ್ವದಲ್ಲಿ ಮಾತ್ರವೇ ಅದರ ಅನುಭವ ಉಂಟಾಗುವುದು. (ಉಪನಿಷತ್ತುಗಳ ರಚನೆಕಾರರು ಬಲವಾಗಿ ವಿರೋಧಿಸಿದ) ಬಹುತ್ವದ ಭಾವನೆ ಉಂಟಾಗಲು ಹೇಗೆ ತಾನೇ ಸಾಧ್ಯ?"**

ಹೀಗೆ ವಿಜ್ಞಾನಿಯಾಗಿದ್ದರೂ, ವಿಜ್ಞಾನದ ಸೀಮಿತ ಎಲ್ಲೆಯನ್ನು ಮೀರಿನಿಂತು, ವೇದಾಂತ ತತ್ತ್ವದ ಪ್ರಬಲ ಪ್ರತಿಪಾದಕರಾಗಿದ್ದ ಎರ್ವಿನ್ ಸ್ಕ್ರೋಡಿಂಗರ್ ನೈಜ ಅರ್ಥದಲ್ಲಿ ಸತ್ಯಾನ್ವೇಷಕರಾಗಿದ್ದರು.

ಧಾರಾವಾಹಿ

# ಸ್ವಾಮಿ ವಿವೇಕಾನಂದರ ಮಾತೆಯರು

ಸ್ವರ್ಣಗೌರಿ

*(ಫೆಬ್ರವರಿ ೨೦೧೦ ರ ಸಂಚಿಕೆಯಿಂದ)*

## ಮಿಸ್. ಎಲೆನ್ ವಾಲ್ಡೊ

೧೮೯೪ ರ ಡಿಸೆಂಬರ್ ೨೮ ರಂದು ಸ್ವಾಮೀಜಿ ತಮ್ಮ ಧರ್ಮಪ್ರಚಾರ ಕಾರ್ಯದ ನಿಮಿತ್ತ ಬ್ರೂಕ್ಲಿನ್‌ಗೆ ಬಂದರು. ನ್ಯೂಯಾರ್ಕ್‌ನಲ್ಲಿ ಸ್ವಾಮೀಜಿಯವರ ತರಗತಿಗಳು ಹಾಗೂ ಉಪನ್ಯಾಸಗಳಲ್ಲಿ ಭಾಗವಹಿಸಿದ ಎಲ್ಲರಿಗೂ ಚಿರಪರಿಚಿತಳಾದ ಮಿಸ್. ಎಲೆನ್ ವಾಲ್ಡೊ ಬ್ರೂಕ್ಲಿನ್ ನಗರದವಳು ಹಾಗೂ ಸ್ವಾಮೀಜಿಯವರ ಶಿಷ್ಯರಲ್ಲಿ ಅಗ್ರಗಣ್ಯಳು. ಸ್ವಾಮೀಜಿ ಅವಳಿಗೆ 'ಹರಿದಾಸಿ' ಎಂದೇ ಹೆಸರಿಟ್ಟಿದ್ದರು. ಆಕೆ ನಿಜವಾಗಿಯೂ ನಿಷ್ಠಾವಂತ ಸೇವಕಿ. ಅವಳು ಮಾಡುತ್ತಿದ್ದ ಕೆಲಸ ಒಂದೆರಡಲ್ಲ, ಅಡುಗೆ ಮಾಡುವುದು, ಶುಚಿಗೊಳಿಸುವುದು, ಗೃಹಕೃತ್ಯ ನಿರ್ವಹಣೆ, ಬಂದವರನ್ನು ಸಂಧಿಸುವುದು, ಪುಸ್ತಕಗಳ ಪರಿಷ್ಕರಣೆ, ನೋಟ್ಸ್ ತೆಗೆದುಕೊಳ್ಳುವುದು, ಪ್ರೂಫ್ ನೋಡುವುದು, ಬೋಧನೆ ಇತ್ಯಾದಿ ಇತ್ಯಾದಿ. ಪ್ರತಿನಿತ್ಯ ಬೆಳಿಗ್ಗೆ ೮ ಘಂಟೆಗೆ ಬಂದು, ರಾತ್ರಿ ಹತ್ತು ಘಂಟೆಯವರೆಗೂ ಇದ್ದು ಸ್ವಾಮೀಜಿಗೆ ಅನೇಕ ವಿಧದಲ್ಲಿ ಅವಳು ಸಹಾಯ ಮಾಡುತ್ತಿದ್ದಳು.

ಈ ಸಂದರ್ಭದಲ್ಲಿಯೇ ಸ್ವಾಮಿ ವಿವೇಕಾನಂದರ 'ರಾಜ ಯೋಗ' ಪುಸ್ತಕವು ಸಿದ್ಧವಾಯಿತು. ಅದರ ಹೆಚ್ಚು ಭಾಗ ಸ್ವಾಮೀಜಿ ಈಕೆಗೆ ಹೇಳಿ ಬರೆಸಿದ್ದು. ಆಕೆಯ ಪಾಲಿಗೆ ಅದೊಂದು ಚಿರಸ್ಮರಣೀಯ ಕಾಲಘಟ್ಟ. ಸ್ವಾಮೀಜಿ ವಾಲ್ಡೊವಿಗೆ ತಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಧಾರೆಯೆರೆದು, ಆಕೆ ಸ್ವತಂತ್ರವಾಗಿ 'ರಾಜಯೋಗ'ದ ತರಗತಿಗಳನ್ನು ನಡೆಸಲು ಯೋಗ್ಯಳೆಂದು ಸಾರಿದರು. ಸ್ವಾಮೀಜಿಯ ಕೋರಿಕೆಯ ಮೇರೆಗೆ ವಾಲ್ಡೊ ಸ್ವತಃ ತರಗತಿಗಳನ್ನು ಪ್ರಾರಂಭಿಸಿದಳು. ಅಮೆರಿಕದ ಸಹಸ್ರದ್ವೀಪೋದ್ಯಾನದಲ್ಲಿ ಸ್ವಾಮೀಜಿ ನಡೆಸಿದ ತರಗತಿಗಳ ಟಿಪ್ಪಣಿಯನ್ನು ಗುರುತುಹಾಕಿಕೊಂಡು 'ಸ್ಫೂರ್ತಿವಾಣಿ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದು ಈಕೆಯೇ. ಈಕೆ ಸ್ವಾಮೀಜಿಯವರ ಇಡೀ ಉಪನ್ಯಾಸವನ್ನು ಕೆಲವೇ ಮಾತುಗಳಲ್ಲಿ ಹೇಳುವ ಸಾಮರ್ಥ್ಯವನ್ನೂ ಪಡೆದಿದ್ದಳು.

ಸ್ವಾಮಿ ವಿವೇಕಾನಂದರು ತನ್ನ ಮೇಲೆ ಬೀರಿದ ಪ್ರಭಾವದ ಬಗ್ಗೆ ವಾಲ್ಡೊ ಹೀಗೆ ಹೇಳುತ್ತಾಳೆ: "ಅವರ ಪುಣ್ಯಸ್ಮೃತಿ ನಮ್ಮ ಹೃದಯಗಳಲ್ಲಿ ಜೀವಂತವಾಗಿ ಉಳಿಯುವುದು. ಅವರು ನಮಗೆ ಮಾಡಿದ ಸೇವೆಗಾಗಿ ನಮ್ಮ ಕೃತಜ್ಞತೆಯು ಎಂದೆಂದಿಗೂ ಮಸುಕಾಗದು. ಅಂತಹ ವ್ಯಕ್ತಿಯನ್ನು ಸಂಧಿಸುವುದೊಂದು ಅಮೂಲ್ಯ ಅವಕಾಶ. ಅವರು ನಿಜವಾಗಿಯೂ ಮಹಾತ್ಮರು ಮತ್ತು ಮಹಾಕಾರ್ಯವನ್ನು ಕೈಗೊಂಡವರು. ಧನ್ಯ ಸ್ವಾಮೀಜಿ!" ವಾಲ್ಡೊವನ್ನು ಕುರಿತು ಸ್ವಾಮೀಜಿ, "ದೇವರ ಬಗ್ಗೆ ಹಾಗೂ ಇಡೀ ಮಾನವಕುಲದ ಬಗ್ಗೆ ಪ್ರೀತಿಯಿಂದ ಕೂಡಿದ ಜೀವಿ" ಎನ್ನುತ್ತಿದ್ದರು.




## ಭಗಿನಿ ಕ್ರಿಸ್ಟೈನ್

ಸ್ವಾಮೀಜಿ ಡೆಟ್ರಾಯ್ಟ್‌ಗೆ ಮೊದಲ ಬಾರಿ, ೧೮೯೪ ರ ಫೆಬ್ರವರಿ ತಿಂಗಳಿನಲ್ಲಿ ಆಗಮಿಸಿದರು. ಅಲ್ಲಿ ಸ್ವಾಮೀಜಿಯವರನ್ನು ಮೊದಲ ಬಾರಿ ಭೇಟಿ ಮಾಡಿದ ಭಗಿನಿ ಕ್ರಿಸ್ಟೈನ್‌ಳ ಅನುಭವವನ್ನು ಕೇಳೋಣ: "೧೮೯೪ ರ ಫೆಬ್ರವರಿ ತಿಂಗಳ ಒಂದು ರಾತ್ರಿ ಡೆಟ್ರಾಯ್ಟ್‌ನ ಯೂನಿಟರಿ ಚರ್ಚ್‌ಗೆ ಒಂದು ಉಪನ್ಯಾಸವನ್ನು ಕೇಳಲು ನಾನು ಒಲ್ಲದ ಮನಸ್ಸಿನಿಂದ ಹೊರಟಿದ್ದೆ. ಅದು ನನ್ನ ಜೀವನದ ಗತಿಯನ್ನೇ ಬದಲಾಯಿಸುವುದು ಮತ್ತು ಹಿಂದಿನ ಯಾವ ಪ್ರಮಾಣದಿಂದಲೂ ಅಳೆಯಲಾಗದ ನನ್ನ ಜೀವನದ ಅತ್ಯಂತ ಮಹತ್ವಪೂರ್ಣ ಘಟನೆಯಾಗುವುದು ಎಂದು ನಾನು ಆಗ ಎಣಿಸಿಯೇ ಇರಲಿಲ್ಲ. ನನ್ನ ಸ್ನೇಹಿತೆ ಮಿಸೆಸ್. ಮೇರಿ ಸಿ. ಫಂಕಿಯ ಒತ್ತಾಯಕ್ಕೆ ಮಣಿದು, ಮನಸ್ಸಿಲ್ಲದ ಮನಸ್ಸಿನಿಂದ, ಭಾರತದಿಂದ ಬಂದ ಸ್ವಾಮಿ ವಿವೇಕಾನಂದರ ಈ ಭಾಷಣವನ್ನು ಕೇಳಲು ನಾನು ಹೋದೆ. ಐದು ನಿಮಿಷಗಳ ಕಾಲ ಭಾಷಣವನ್ನು ಕೇಳುವುದೇ ತಡ, ಇಷ್ಟು ಕಾಲವೂ ನಾವರಸುತ್ತಿದ್ದ ಸ್ಪರ್ಶಮಣಿಯು ದೊರಕಿತೆಂದು ನಮಗೆ ದೃಢವಾಯಿತು. ಇದನ್ನು ನಾವು ತಪ್ಪಿಸಿಕೊಂಡಿದ್ದರೆ ಎಂಥ ನಷ್ಟವಾಗುತ್ತಿತ್ತು ಎಂದು ಉದ್ಗಾರವೆಳೆದೆವು."

ಜರ್ಮನ್ ದಂಪತಿಗೆ ಜನಿಸಿದ ಕ್ರಿಸ್ಟೈನ್‌ಗೆ ಬದುಕು ಅತ್ಯಂತ ಕ್ರೂರವಾಗಿತ್ತು. ತಂದೆ ಬುದ್ಧಿವಂತನಲ್ಲದ ಕಾರಣ ವ್ಯಾಪಾರದಲ್ಲಿ ಎಲ್ಲವನ್ನೂ ಕಳೆದುಕೊಂಡನು. ನಾಲ್ಕು ಸಹೋದರಿಯರಿದ್ದ ಕುಟುಂಬನಿರ್ವಹಣೆಯ ಭಾರ ಹಿರಿಯವಳಾದ ಆಕೆಯ ಪಾಲಿಗೇ ಬಂತು. ಡೆಟ್ರಾಯ್ಟ್ ಪಬ್ಲಿಕ್ ಸ್ಕೂಲ್‌ನ ಉಪಾಧ್ಯಾಯಿನಿ ಆಗಿದ್ದ

ಆಕೆಯನ್ನು ಮೊದಲ ಬಾರಿ ಸಂಧಿಸಿದಾಗ ಉದ್ಭವಿಸಿದ ಭಾವನೆಗಳ ಬಗ್ಗೆ ಸ್ವಾಮೀಜಿ ಹೀಗೆ ಬರೆಯುತ್ತಾರೆ: "ಆಕೆ ತುಂಬಾ ಪವಿತ್ರಳು, ತುಂಬಾ ಪವಿತ್ರಳು... ಅನ್ನಿಸಿತು. ನನ್ನ ಕೊಲ್ಕತಾದ ಕೆಲಸಕ್ಕೆ ಇವಳು ಸಹಾಯಕಳಾಗುವಳು ಎಂದೂ ಭಾಸವಾಯಿತು."

ಸಚ್ಚಾರಿತ್ರ್ಯವುಳ್ಳ ಕೆಲವು ಮಹಿಳೆಯರೊಡನೆ ಸ್ವಾಮೀಜಿ ಹಲವು ರೀತಿಯ ಮಾನವೀಯ ಬಾಂಧವ್ಯಗಳನ್ನು ಇಟ್ಟುಕೊಂಡಿದ್ದರು. ಮಿಸೆಸ್. ಓಲಿ ಬುಲ್‌ರನ್ನು ತಾಯಿಯಂತೆ, ನಿವೇದಿತಾಳನ್ನು ವಿದ್ಯಾರ್ಥಿನಿಯಂತೆ, ಮೇರಿ ಹೇಲ್‌ಳನ್ನು ತಂಗಿಯಂತೆ, ಜೊಸೆಫಿನ್ ಮ್ಯಾಕ್‌ಲೌಡ್‌ಳನ್ನು ಸ್ನೇಹಿತೆಯಂತೆ, ಕ್ರಿಸ್ಟೈನ್‌ಳನ್ನು ಮಗಳಂತೆ ಸ್ವಾಮೀಜಿ ಕಾಣುತ್ತಿದ್ದರು. ಭಗಿನಿ ಗಾರ್ಗಿ (ಮೇರಿ ಲೂಯಿಸ್ ಬರ್ಕ್) ತನ್ನ 'Swami Vivekananda: Human and Divine' ಎಂಬ ಪುಸ್ತಕದಲ್ಲಿ, "ಮಾನವೀಯ ಅರ್ಥದಲ್ಲಿ ಯಾರಾದರೂ ಸ್ವಾಮೀಜಿಯ ಮಗಳಾಗಿದ್ದರೆ, ಅದು ಕ್ರಿಸ್ಟೈನ್ ಎಂದು ನನಗೆನ್ನಿಸುವುದು" ಎಂದು ಬರೆಯುತ್ತಾರೆ. ಭಗಿನಿ ಕ್ರಿಸ್ಟೈನ್‌ಗೆ ಸ್ವಾಮೀಜಿ ಸುಮಾರು ೬೦ ಪತ್ರಗಳನ್ನು ಬರೆದಿದ್ದಾರೆ. ಅವೆಲ್ಲವೂ ಅತ್ಯಂತ ಆತ್ಮೀಯ ಪತ್ರಗಳು. ತಮ್ಮ ಜೀವಿತದ ಕೊನೆಯವರೆಗೂ ಆಕೆಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸ್ವಾಮೀಜಿ ತುಂಬಾ ಕಾಳಜಿ ವಹಿಸಿದ್ದರು. ಆಕೆಯ ಹಡಗಿನ ಟಿಕೇಟಿಗಾಗಿ ಮಿಸೆಸ್. ಸೇವಿಯರ್ ಮುಖಾಂತರ ನೂರು ಡಾಲರುಗಳನ್ನು ಕಳುಹಿಸಿದ್ದಲ್ಲದೆ, "ಆಕೆಗಾಗಿ ನಾನು ಭಿಕ್ಷೆ ಬೇಡಲೂ ಸಿದ್ಧ" ಎಂದೂ ಪತ್ರ ಬರೆದಿದ್ದರು!

ಸಹಸ್ರದ್ವೀಪೋದ್ಯಾನದಲ್ಲಿ ಸ್ವಾಮೀಜಿಯವರ ತರಗತಿಗಳಲ್ಲಿ ಉಪಸ್ಥಿತರಿದ್ದ ಶಿಷ್ಯರಲ್ಲೆಲ್ಲಾ ಕ್ರಿಸ್ಟೈನ್ ಒಬ್ಬಳೇ ತನ್ನ ಜೀವಿತದ ಕೊನೆಗಾಲದವರೆಗೆ ಸ್ವಾಮೀಜಿಯ ಕೊಲ್ಕತಾ ಕೆಲಸಕ್ಕೆ ನೆರವಾದದ್ದು ಎನ್ನುವುದು ಗಮನಾರ್ಹ. ಆಕೆ ಹಾಗೂ ನಿವೇದಿತಾ ಒಟ್ಟಿಗೆ ಸೇರಿ ಪ್ರಾರಂಭಿಸಿದ, 'ಹೋಮ್ ಆಫ್ ಸಿಸ್ಟರ್ಸ್' ಎಂಬ ಶಾಲೆ ಮುಂದೆ ಬೃಹದಾಕಾರವಾಗಿ ಬೆಳೆಯಿತು. 'ನಿವೇದಿತಾ ಶಾಲೆ' ಎಂದು ಪ್ರಖ್ಯಾತವಾಗಿರುವ ಇದು ಈಗಲೂ ಅನೇಕ ಸ್ತ್ರೀಯರಿಗೆ ಆಶ್ರಯಸ್ಥಾನವಾಗಿದೆ.

ಸ್ವಾಮೀಜಿಯವರನ್ನು ಕುರಿತ ಕ್ರಿಸ್ಟೈನ್‌ಳ ಈ ಕೆಳಗಿನ ಹೇಳಿಕೆ ಅತ್ಯಂತ ಮಹತ್ವಪೂರ್ಣವಾಗಿದೆ: "ಅಂಥ ಮಹಾಪುರುಷನಿಗೆ ಜನ್ಮವಿತ್ತ ದೇಶ ಧನ್ಯ! ಅದೇ ಕಾಲದಲ್ಲಿ ಭೂಮಿಯ ಮೇಲೆ ವಾಸಿಸಿದವರೂ ಧನ್ಯರು! ಅವರ ಪದದಡಿಯಲ್ಲಿ ಕುಳಿತವರಂತೂ ಅತ್ಯಂತ ಧನ್ಯರು! ಅಂಥ ಒಬ್ಬರನ್ನು ನಾನು ನೋಡಿದೆ, ಕೇಳಿದೆ, ಗೌರವಿಸಿದೆ ಮತ್ತು ನನ್ನ ಹೃನ್ಮನಗಳನ್ನು ಅವರ ಚರಣಕ್ಕರ್ಪಿಸಿಕೊಂಡೆ!"

## ಮಿಸೆಸ್. ಸಾರಾ ಓಲಿ ಬುಲ್

ಡೆಟ್ರಾಯ್ಟ್‌ನಿಂದ ಸ್ವಾಮೀಜಿ ೧೮೯೪ ರ ಸೆಪ್ಟೆಂಬರ್ ೧೨ ರಂದು ಬಾಸ್ಟನ್ ನಗರಕ್ಕೆ ಬಂದರು. ಅದು ಅಮೆರಿಕದಲ್ಲಿ ಅವರ ಪ್ರಚಾರಕಾರ್ಯದ ಎರಡನೆಯ ವರ್ಷವಾಗಿತ್ತು. ಇಲ್ಲಿಯೇ ಸ್ವಾಮೀಜಿ, ನಾರ್ವೆ ದೇಶಕ್ಕೆ ಸೇರಿದ ಪ್ರಸಿದ್ಧ ಪಿಟೀಲುವಾದಕನಾದ ಮಿಸ್ಟರ್ ಓಲಿ ಬುಲ್ ಅವರ ಪತ್ನಿಯಾದ ಮಿಸೆಸ್. ಸಾರಾ ಓಲಿ ಬುಲ್ ಎಂಬಾಕೆಯನ್ನು ಭೇಟಿಯಾದರು. ಆಕೆಯ ಪತಿ ಅಷ್ಟುಹೊತ್ತಿಗೆ ನಿಧನನಾಗಿದ್ದನು. ಮುಂದೆ ಜೀವನಪರ್ಯಂತ



ಮಿಸೆಸ್. ಸಾರಾ ಓಲಿ ಬುಲ್

ಸ್ವಾಮೀಜಿಯ ಕಾರ್ಯಕ್ಕಾಗಿ ತನ್ನನ್ನೇ ಸಮರ್ಪಿಸಿಕೊಂಡ ಮಹಾನ್ ಚೇತನ, ಈ ಸಾರಾ! ಸ್ವಾಮೀಜಿ ಆಕೆಯ ಮನೆಯಲ್ಲಿ ಮೂರು ಬಾರಿ ಆತಿಥ್ಯ ಸ್ವೀಕರಿಸಿದ್ದರು. ಸ್ತ್ರೀಯರಿಗಾಗಿ ಒಂದು ಮಠ ಪ್ರಾರಂಭಿಸಬೇಕೆಂಬ ಆಲೋಚನೆ ಮೊದಲ ಬಾರಿಗೆ ಅವರಿಗೆ ಮೂಡಿದ್ದು ಅಲ್ಲಿಯೇ.

ಹೀಗೆ ಸಾರಾಳ ಸುದೀರ್ಘ ಸೇವಾಜೀವನ ಪ್ರಾರಂಭವಾಯಿತು. ಕೇವಲ ಹಣದ ರೂಪದ ಸೇವೆಯೊಂದರಿಂದಲೇ ಅದು ಅಂತ್ಯಗೊಳ್ಳಲಿಲ್ಲ. ಆಕೆ ತನ್ನ ಮನೆಯನ್ನು ಸ್ವಾಮೀಜಿಯ ಭಾಷಣಗಳಿಗಾಗಿ ತೆರವು ಮಾಡಿದಳು ಹಾಗೂ ಮುಂದಿನ ಎರಡು ವರ್ಷಗಳ ಕಾಲ ಸ್ವಾಮೀಜಿಯ ಅಮೆರಿಕ ಪ್ರಚಾರ ಕಾರ್ಯದಲ್ಲಿ ಎಲ್ಲ ರೀತಿಯ ನೆರವನ್ನೂ ಕೊಟ್ಟಳಷ್ಟೇ ಅಲ್ಲ, ಸ್ವಾಮೀಜಿಯನ್ನು ತನ್ನ 'ಪುತ್ರ'ನೆಂದೇ ಭಾವಿಸಿ ಅವರ ಶಿಷ್ಯರ ಮನೆಯವರಿಗೆಲ್ಲಾ ಆರ್ಥಿಕ ನೆರವು ನೀಡಿದಳು. ಸ್ವಾಮಿ ಶಾರದಾನಂದ, ಶ್ರೀಮಾತೆ ಶಾರದಾದೇವಿ, ಶ್ರೀರಾಮಕೃಷ್ಣರ ಸ್ತ್ರೀಶಿಷ್ಯರು, ಸ್ವಾಮೀಜಿಯ ಶಿಷ್ಯರು – ಹೀಗೆ ಹಲವಾರು ಜನರು ಅವಳ ಆರ್ಥಿಕ ಸಹಾಯವನ್ನು ಪಡೆದರು. ತನ್ನ ಸಂನ್ಯಾಸಿ ಮಕ್ಕಳು ತಮ್ಮ ಸಂಪೂರ್ಣ ಶಕ್ತಿಯನ್ನು ಆಧ್ಯಾತ್ಮಿಕ ಹಾಗೂ ಮಠದ ಕಾರ್ಯಗಳಿಗೆ ವಿನಿಯೋಗಿಸಲಿ ಎನ್ನುವದು ಈಕೆಯ ಇಂಗಿತ. ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಪರಿಹಾರ ಕಾರ್ಯ ಮೊದಲು ಪ್ರಾರಂಭವಾದದ್ದು ಈಕೆಯ ಆರ್ಥಿಕ ಸಹಾಯದಿಂದಲೇ. ಸ್ವಾಮಿ ಶಾರದಾನಂದರು ತಮ್ಮ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ದಲ್ಲಿ, "ಶ್ರೀರಾಮಕೃಷ್ಣರಿಗೆ ಆರ್ಥಿಕ ಸೌಲಭ್ಯ ಒದಗಿಸಲು ನಾಲ್ಕು ಮುಖ್ಯ ಸ್ತಂಭಗಳಿದ್ದವು, ಅದರಲ್ಲಿ ಒಂದು ಮಿಸೆಸ್ ಓಲಿ ಬುಲ್" ಎಂದು ಬರೆಯುತ್ತಾರೆ! ಸ್ವಾಮೀಜಿಯವರ ಭಕ್ತರಲ್ಲೆಲ್ಲಾ 'ಸಂತ ಸಾರಾ' ಎಂದೇ ಆಕೆ ಚಿರಪರಿಚಿತಳಾಗಿದ್ದಳು.

ಒಮ್ಮೆ ನ್ಯೂಯಾರ್ಕ್‌ನ ಔತಣಕೂಟವೊಂದರಲ್ಲಿ ಒಬ್ಬರು, "ಸ್ವಾಮೀಜಿ, 'ಸಂತ'ರನ್ನು ಕುರಿತು ನಿಮ್ಮ ವಿವರಣೆ ಏನು?" ಎಂದು ಕೇಳಿದರು. ಅವರ ಉತ್ತರವನ್ನು ಕೇಳಲು ನೆರೆದವರೆಲ್ಲಾ